ಮೂಗಿನ ಅರ್ಧ ಭಾಗ ಮೂಳೆಯಿಲ್ಲದೆ ಮೃದುವಾಗಿರುವುದರಿಂದಲೇ 'ಮೂಗು ಕೊಯ್ಯದೆ ಮಾಣ್ಬನೇ' ಎಂಬಂಥ ನುಡಿಗಟ್ಟು ಸೃಷ್ಟಿಯಾಗಿದ್ದಿರಬೇಕು. 'ಮೂಳರ ಮೂಗ ಕೊಯ್ದು ಪಡಿಹಾರಿಗಳ ಪಾದುಕದಿ ಹೊಡೆ... ಮೂಳರ ಮೂಗು ಕೊಯ್ದು ಉಪ್ಪು ಸಾರು ತುಂಬಿ ಪಡುವಣ ದಾರಿಗೆ ಹಿಡಿ...' ಎಂದು ಮುಂತಾಗಿ ಅಂಬಿಗರ ಚೌಡಯ್ಯ ತಿಳಿಗೇಡಿ ಮೂಳರಿಗೆ ಮೂಗು ಅನಗತ್ಯ ಎಂದು ಹೇಳಿದರೆ, 'ಆ ಬದಗನ ತೋಳ್ ಮುಟ್ಟಿದಂತೆ ಮಾಡಿದ ವಿಧಿಯೇ ನೀನು ಸಿಕ್ಕರೆ ನಿನ್ನ ಮೂಗನ್ನು ಕೊಯ್ದು ಇಟ್ಟಿಗೆಯಿಂದ ಒರೆಸಿಬಿಡುತ್ತೇನೆ...' ಎಂದು ಯಶೋಧರ ಚರಿತೆಯಲ್ಲಿ ಕವಿ ಜನ್ನ ಹೇಳುವ ಮಾತಿನಿಂದ ನಮಗೆ ಮಾತ್ರವಲ್ಲ ವಿಧಿಗೂ ಮೂಗಿದೆ ಎಂದೂ, ಅದು ಅತ್ಯಂತ ನೋವಾಗುವ ಜಾಗವೆಂದೂ ಅರ್ಥ ಮಾಡಿಕೊಳ್ಳಬಹುದು.

ಜನಸಾಮಾನ್ಯರಿಗೆ ದಕ್ಕದ, ಮಾತು, ಮೌನ, ನೆನಪು, ಕನಸು, ಸಾವು ಇತ್ಯಾದಿ ಅಮೂರ್ತ ವಿಷಯಗಳ ವಾಸನೆ ಚರ್ಮಚಕ್ಷುಗಳಾದ ಕವಿ ಸಾಹಿತಿಗಳ ಮನೋನಾಸಿಕಕ್ಕೆ ಸಿಕ್ಕಿ ಸಾಹಿತ್ಯವಾಗುತ್ತದೆ. ಎಲ್ಲರಿಗೂ ಮೂಗುದಾರ ಹಾಕಿ ಪಳಗಿಸುವ ಮಾನವನು ವ್ಯಾಸರ ಕಾಲದಿಂದಲೂ ಇದರ ವಶವರ್ತಿಯೇ ಆಗಿದ್ದ ಎಂಬುವುದಕ್ಕೆ ಪುರಾವೆ ಇಲ್ಲಿದೆ ನೋಡಿ.

ಅವಳ ದೇಹದ ಕಂಪಿನಿಂದ
ಇವನ ದೇಹವು ಕಂಪಿಸಿತ್ತು.
ಮೂಗು ಮಹಾ ಕಲಹಕ್ಕೆ
ಅಂದೇ ನಾಂದಿ ಹಾಡಿತ್ತು.

ಮೂಗಿನ ಈ ಕರಾಮತ್ತುಗಳನ್ನು ನೋಡಿ ಈಗಲಾದರೂ 'ಮೂಗು ಬಿಟ್ಟವನು ಊರಿಗೆ ದೊಡ್ಡವನು' ಎಂದು ಹೇಳಬಹುದೇ? ಮೂಗನ್ನು ಬಗೆದಾಗ ಸಿಕ್ಕಿದ ಕಸವಿಷ್ಟು. ಈ ಹಸಿಕಸ ಒಣಕಸಗಳ ಮೂಗಿನ ಬಗ್ಗೆ ಕಂತೆ ಕಂತೆ ಹುಸಿಯನ್ನು ಹೊಸೆದು ಪಿನೋಕಿಯೋನಂತೆ ನನ್ನ ನಾಸಿಕವೂ ಸಮೃದ್ಧವಾಗಿ ಬೆಳೆಯತೊಡಗಿ ಮನೆಯಿಂದ ಹೊರಬರಲಾರದೆ ಫಜೀತಿಯಾದರೆ ಎಂಬ ಭಯವಿರುವುದರಿಂದ ಇದನ್ನು ಇಲ್ಲಿಗೇ ಸಮಾಪ್ತಿಸುತ್ತಿದ್ದೇನೆ.

ಈ ಬರಹ ಓದಿದ ಕೆಲರು ಇದರಲ್ಲೇನಿಲ್ಲವೆಂದು
ಮೂಗು ಮುರಿದರೂ ಬೇಸರವೇನಿಲ್ಲ
ಏಕೆಂದರೆ ಮುರಿಯುವುದು
ಅವರದೇ ಮೂಗಲ್ಲವೇ?

**ರೇಶ್ಮಾ ಭಟ್**

ಹುಟ್ಟೂರು ಕೊಡಗಿನ ವಿರಾಜಪೇಟೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ನಿವಾಸಿ. ವೃತ್ತಿಯಲ್ಲಿ ಉಪನ್ಯಾಸಕಿ. 'ನವೆ ನವೋನ್ಮೇಷಶಾಲಿನೀ' ಎಂಬ ಲಲಿತ ಪ್ರಬಂಧ ಸಂಕಲನ ಹಾಗೂ 'ಕಥಾ ವ್ಯವಕಲನ' ಎನ್ನುವ ಕಥಾಸಂಕಲನ ಪ್ರಕಟವಾಗಿದೆ. ಕತೆ, ಲಲಿತ ಪ್ರಬಂಧ, ಲೇಖನ, ಕವನ, ಹನಿಗತೆಗಳು, ಹನಿಗವನಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಗಮಕಿ ಹಾಗೂ ಆಕಾಶವಾಣಿ ಕಲಾವಿದೆ.